ಓ.ಎಸ್. ನಂ. 13/2022
ಪಿ.ಡಬ್ಲ್ಯೂ- 1

(ಇಂದು ದಿಃ 18-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)
ಪಾಟೀ ಸವಾಲು **:- 9** ಮತ್ತು **10** ನೇ ಪ್ರತಿವಾದಿಯರ ಪರ ಶ್ರೀ**.S.B.M** ವಕೀಲರಿಂದ **:-**

ದಾವಾ ಸ್ವತ್ತುಗಳು ನನ್ನ ಮಾವನಿಗೆ ಆತನ ತಾಯಿ ಕಡೆಯಿಂದ ಬಂದ ಸ್ವತ್ತುಗಳು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನನ್ನ ಮಾವನ ತಂದೆ ಕಡೆಯಿಂದ ನನ್ನ ಮಾವನಿಗೆ ಬಂದಿವೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೇನೆ. ದಾವಾ ಸ್ವತ್ತುಗಳು ನನ್ನ ಮಾವನಿಗೆ ಆತನ ತಾಯಿ ಕಡೆಯಿಂದ ಬಂದ ಸ್ವತ್ತುಗಳು ಆಗಿರುವ ಕಾರಣ ದಾವಾ ಸ್ವತ್ತುಗಳಲ್ಲಿ ವಾದಿಯರಾದ ನಮಗೆ ಯಾವುದೇ ಹಕ್ಕು ಮತ್ತು ಭಾಗ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಮಗೆ ಭಾಗ ಬರಬಾರದು ಎಂಬ ಉದ್ದೇಶದಿಂದ 2 ರಿಂದ 6 ನೇ ಪ್ರತಿವಾದಿಯರ ಮಾತು ಕೇಳಿಕೊಂಡು ಸರ್ವೆ ನಂ. 731/1 ರ ಜಮೀನನ್ನು ಮಾರಾಟ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಕುಟುಂಬದ ಕಾನೂನಾತ್ಮಕ ಅವಶ್ಯಕತೆಗಾಗಿ ಸದರಿ ಸ್ವತ್ತನ್ನು 9 ಮತ್ತು 10 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ನನ್ನ ಮದುವೆಯಾಗಿ 2 ವರೆ ವರ್ಷ ಆಗಿದೆ. ನನ್ನ ಮದುವೆಯನ್ನು 1 ನೇ ಪ್ರತಿವಾದಿ ಖರ್ಚು ಮಾಡಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡ ಸಿದ್ದಪ್ಪನಿಗೆ ಮದ್ಯಪಾನ ಮಾಡುವ ಹವ್ಯಾಸ ಇತ್ತು ಎಂದರೆ ಸರಿಯಲ್ಲ. ಆತ ಮದ್ಯಪಾನ ಕುಡಿದು ಕುಡಿದು ತನ್ನ ಆರೋಗ್ಯ ಹಾಳು ಮಾಡಿಕೊಂಡಿದ್ದ ಎಂದರೆ ಸರಿಯಲ್ಲ. ನನ್ನ ಗಂಡನಿಗೆ 1 ನೇ ಪ್ರತಿವಾದಿ ಚಿಕಿತ್ಸೆ ಕೊಡಿಸಿದ್ದಾರೆ ಎಂದರೆ ಸರಿಯಲ್ಲ . ಆರೀತಿ ಚಿಕಿತ್ಸೆ ಕೊಡಿಸಲು 1 ನೇ ಪ್ರತಿವಾದಿ ಲಕ್ಷಾಂತರ ರೂಪಾಯಿ ಸಲಾ ಮಾಡಿ ಖರ್ಚು ಮಾಡಿದ್ದರು ಎಂದರೆ ಸರಿಯಲ್ಲ. ಸಾಕಷ್ಟು ಚಿಕಿತ್ಸೆ ಕೊಡಿಸಿದ್ದರು ನನ್ನ ಗಂಡ ದಿಃ 18-08-2021 ರಂದು ತೀರಿಹೋದರು ಎಂದರೆ ದಿಃ 18-08-2021 ರಂದು ತೀರಿಹೋಗಿದ್ದು ನಿಜ ಆದರೆ ಅವರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದು ಹೇಳುತ್ತಾರೆ. ನನ್ನ ಗಂಡ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಆಸ್ಪತ್ರೆ ವ್ಯಚ್ಚಕ್ಕೆ ಮಾಡಿದ್ದ ಸಾಲ ತೀರಿಸುವ ಸಲುವಾಗಿ 1 ನೇ ಪ್ರತಿವಾದಿ ಮೇಲಿನ ಜಮೀನನ್ನು 9 ಮತ್ತು 10 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಜಮೀನನ್ನು ನನ್ನ ಗಂಡ ತೀರಿಹೋದ 1 ವರೆ ತಿಂಗಳ ಒಳಗಾಗಿ ಅಂದರೆ ದಿಃ 08-10-2021 ರಂದು ಮಾರಾಟ ಮಾಡಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ಒಪ್ಪಿಗೆ ಪಡೆದು

ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ಕೊಡ್ಲಾ ಗ್ರಾಮದಲ್ಲಿ 1 ಎಕರೆ ಜಮಿನಿಗೆ 7 ರಿಂದ 8 ಲಕ್ಷ ಬೆಲೆ ಇದೆ ಎಂದರೆ 20 ಲಕ್ಷ ಬೆಲೆ ಇದೆ ಎಂದು ಹೇಳುತ್ತಾರೆ. 20 ಲಕ್ಷ ಮಾರುಕಟ್ಟೆ ಬೆಲೆ ಇದೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. 9 ಮತ್ತು 10 ಪ್ರತಿವಾದಿಯರು ಜಮೀನಿಗೆ ಸರ್ಕಾರ ನಿಗದಿ ಪಡಿಸಿದ ದರಕ್ಕೆ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನು ಫಲವತ್ತಾದ ಜಮೀನು ಅಲ್ಲಾ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಗಂಡನನ್ನು 20 ವರ್ಷಗಳ ಹಿಂದೆ ಮನೆಯಿಂದ ಹೊರಹಾಕಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ನನ್ನ ಸೋದರತ್ತೆ ಮಗನಾದ ಕಾರಣ ಆ ಸಂಗತಿ ನನಗೆ ಗೊತ್ತಿದ್ದೆ. 20 ವರ್ಷಗಳ ಹಿಂದೆ 1 ನೇ ಪ್ರತಿವಾದಿ ನನ್ನ ಗಂಡನನ್ನು ಹೊರಹಾಕಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಮದುವೆ ಮತ್ತು ಆತನ ಆಸ್ಪತ್ರೆ ವೆಚ್ಚಕ್ಕೆ ಮಾಡಿದ್ದ ಸಾಲ ತೀರಿಸುವ ಸಲುವಾಗಿ 1 ನೇ ಪ್ರತಿವಾದಿ 9 ಮತ್ತು 10 ನೇ ಪ್ರತಿವಾದಿಯರಿಗೆ ಜಮೀನು ಮಾರಾಟ ಮಾಡಿದ್ದಾರೆ ಎಂದರ ಸರಿಯಲ್ಲ. ದಾವಾ ಸ್ವತ್ತುಗಳು 1 ನೇ ಪ್ರತಿವಾದಿಯ ತಾಯಿ ಕಡೆಯಿಂದ 1 ನೇ ಪ್ರತಿವಾದಿಗೆ ಬಂದಿದ್ದ ಸಂಗತಿ ನನ್ನ ಗಂಡನಿಗೆ ಗೊತ್ತಿತ್ತು ಕಾರಣ ಆತ ಬದುಕಿದ್ದಾಗ ದಾವಾ ಸ್ವತ್ತುಗಳಲ್ಲಿ ಭಾಗ ಕೇಳಿರಲಿಲ್ಲ ಎಂದರೆ ಸರಿಯಲ್ಲ. 9 ಮತ್ತು 10 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ದುರುದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.